ಮಾಡುವುದು ಹೇಗೆ? ನಮಗೆ ತಾವು ರಕ್ಷಣೆ ಕೊಡಬೇಕು. ನಮಗೆ ರಕ್ಷಣೆಯಿಲ್ಲದಿದ್ದರೆ ನಾವು ಕೆಲಸ ಹೇಗೆ ಮಾಡುವುದು.?

(ಗೊಂದಲ)

ಅಧ್ಯಕ್ಷರು : ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ, ನಾನು ತೀರ್ಮಾನ ಮಾಡುತ್ತೇನೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ : 15ನೇ ಆಗಸ್ಟ್ ಹಾಗೂ ಕನ್ನಡ ರಾಜ್ಯೋತ್ಸವದಂದು ಯಾರು ಧ್ವಜಾರೋಹಣ ಮಾಡಬೇಕೆಂಬ ಬಗ್ಗೆ ಸರ್ಕಾರದವರು ಒಂದು ಆದೇಶ ಕೊಡಲಿ.

(ಗೊಂದಲ)

ಅಧ್ಯಕ್ಷರು : ಅದು ಬೇರೆ ವಿಚಾರ. ಈಗ ನಾನು ಇದರ ಬಗ್ಗೆ ನನ್ನ ತೀರ್ಮಾನವನ್ನು ಕೊಡುತ್ತೇನೆ, ದಯಮಾಡಿ ಕೇಳಿ.

ಸಭಾಧ್ಯಕ್ಷರ ನಿರ್ಣಯ :

ಮಾನ್ಯ ದಿನಕರ ಶೆಟ್ಟಿಯವರು ಈ ದಿನ ಶೂನ್ಯ ವೇಳೆಯಲ್ಲಿ, ಕುಮಟಾ ತಾಲ್ಲೂಕಿನ ಉಪ ವಿಭಾಗಾಧಿಕಾರಿಯವರು ತಾರೀಖು : 19–12–2009 ರಂದು ಕುಮಟಾ ತಾಲ್ಲೂಕಿನ ಅನಕೊಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದಂಥ ಜನ ಸ್ಪಂದನ ಕಾರ್ಯಕ್ರಮದಲ್ಲಿ ಶಾಸಕನಾಗಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಂಥ ಸಂದರ್ಭದಲ್ಲಿ ನನಗೆ ಯಾವುದೇ ಅವಕಾಶವನ್ನು ಕೊಡದೇ, ತಾನೇ ಅಧ್ಯಕ್ಷೆ ಎಂಬ ರೀತಿಯಲ್ಲಿ ವರ್ತನೆ ಮಾಡಿ, ಶಾಸಕನಾಗಿ ನನ್ನ ಕರ್ತವ್ಯವನ್ನು ಪಾಲನೆ ಮಾಡುವುದಕ್ಕೆ ತೊಂದರೆ ಮಾಡಿರುತ್ತಾರೆ ಎನ್ನುವಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ಗೌರವಾನ್ವಿತ ಶಾಸಕರು ಕೂಡ ಈ ರೀತಿಯ ಅಧಿಕಾರಿಗಳ ವರ್ತನೆಯ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಎಲ್ಲ ವಿಚಾರವನ್ನು ಪರಿಶೀಲಿಸಿ, ಮೇಲ್ನೋಟಕ್ಕೆ ಇಲ್ಲಿ ಶಾಸಕರ ಹಕ್ಕುಚ್ಯುತಿಯಾಗಿದೆ ಎಂದು ಕಂಡು ಬಂದಿರುವುದರಿಂದ ಈ ಒಂದು ವಿಚಾರವನ್ನು ಹಕ್ಕುಬಾಧ್ಯತಾ ಸಮಿತಿಗೆ ಈ ಮೂಲಕ ಒಪ್ಪಿಸುತ್ತಿದ್ದೇನೆ.

ಶ್ರೀ ಕೆ.ದಿನಕರ ಶೆಟ್ಟಿ : ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ರೇವಣ್ಣನವರೇ ಈಗ ನೀವು ಮಾತನಾಡಿ.